# ವಾಷಿಂಗ್‌ಟನ್ ಕಾರ್ವರ್

ಎಚ್. ಪಾಂಡುರಂಗ ವಿಠಲ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಕಾ**ರ್ವರ್ ದಕ್ಷಿಣಕ್ಕೆ ಪಯಣಿಸಿದ. ಉತ್ತರದ ಹಸಿರು ಕನಸಿನಂತೆ ಮಾಯವಾಯ್ತು. ಕೆಂಪು ಹಳದಿ ಜೇಡಿ ಮಣ್ಣಿನ ಬರಡು ಭೂಮಿಯ ವಿಸ್ತಾರ. ಮಧ್ಯೆ ಸರಿಯಾಗಿ ಬೆಳೆಯದ ಹತ್ತಿ ಹೊಲಗಳು. ಬರಿಯ ಹತ್ತಿ ಬೆಳೆದು ಮಣ್ಣು ಸಾರ ಕಳೆದು ಕೊಂಡಿತ್ತು. ಅಲಬಾಮಾದಲ್ಲಿ ಹಸಿದ, ನಿಸ್ತೇಜ ನೀಗ್ರೋ ಮುಖ ಗಳೇ ಎಲ್ಲೆಲ್ಲೂ. ಆ ಕಣ್ಣುಗಳ ಹತಾಶೆ ಕಾರ್ವರನ ಮನಸ್ಸನ್ನು ಕಾಡಿತು. ಬರಿ ದುಡಿಮೆಯಲ್ಲೆ ಕಾಲಕಳೆದ ನೀಗ್ರೋ ತಲೆಮಾರು ಗಳು—ದುಡಿತವೇ ಅವರ ಹಣೆಬರಹ.

ಬೂಕರ್ ಆತ್ಮೀಯತೆಯಿಂದ ಕಾರ್ವರನನ್ನು ಸ್ವಾಗತಿಸಿದ. ಬಡವ, ಹಿಂದುಳಿದ ತನ್ನವರನ್ನು ಮೇಲೆತ್ತಲು ಪ್ರಯತ್ನಿಸಿದ ಮಹಾನ್ ವ್ಯಕ್ತಿಗಳು—ಮೊದಲ ನೋಟದಲ್ಲಿಯೆ ಇಬ್ಬರೂ ಒಬ್ಬರನ್ನೊಬ್ಬರು ಅರಿತು, ಇಷ್ಟಪಟ್ಟರು. ಆದರೆ ಪ್ರಯೋಗ ಶಾಲೆಯಿರಲಿ, ಅಲ್ಲಿ ಏನೂ ಇರಲಿಲ್ಲ. ಇಟ್ಟಿಗೆ ಮಾಡುವುದನ್ನು ಹೇಳಿಕೊಡುವುದರಿಂದ ಆರಂಭಿಸಿ ಕಟ್ಟಡ ಕಟ್ಟಿಸಿದ್ದ ಬೂಕರ್! ಎಲ್ಲ ಕಟ್ಟಡಗಳೂ ಪ್ರೀತಿ ಮತ್ತು ಕಲಿಕೆಯ ಫಲವಾಗಿದ್ದುವು. ಆದರೂ ಬೂಕರ್ ನಿರಾಶನಾಗಿರಲಿಲ್ಲ, ಈಗ ಕಾರ್ವರನೂ ಜತೆಗೂಡಿದ.

ಬಾಲ್ಯದಿಂದಲೂ ಸಮಸ್ಯೆಗಳನ್ನೆದುರಿಸಿಯೆ ಬೆಳೆದಿದ್ದ ಕಾರ್ವರ್ ಬೇಗನೆ ಕಾರ್ಯಪ್ರವೃತ್ತನಾದ. ಬೂಕರ್ ಕೃಷಿಶಿಕ್ಷಣ ಶಾಖೆ ಬರಿ ಕಾಗದದ ಮೇಲಷ್ಟೆ ಇದೆ ಎಂದು ನಾಚಿಕೆಯಿಂದ ಹೇಳಿದ. ಡೇರಿಯಲ್ಲಿ ಒಂದು ಮುದಿಕುದುರೆ, ಕೆಲ ಉಪಕರಣ ಗಳು ಹಾಗೂ ಒಂದು ಕಡೆಗೋಲು ಮಾತ್ರ ಇದ್ದವು. ಅವನ ವಾಸಕ್ಕೂ, ತರಗತಿ ನಡೆಸಲೂ ಒಂದು ರೂಮು ಕೊಟ್ಟರು. ಹುಡುಗರು, ಯಾರಿಗೂ ಬೇಡದ ವಿಷಯ ಕೃಷಿ ವಿಜ್ಞಾನ. ರೈತರ ಮಕ್ಕಳಾದರೂ ಅದರ ಬಗ್ಗೆ ತಿರಸ್ಕಾರ; ಹೊಲದಲ್ಲಿ ದುಡಿಯು ವುದನ್ನು ತಪ್ಪಿಸಿಕೊಳ್ಳಲೆಂದು ಶಾಲೆಗೆ ಬರುತ್ತಿದ್ದರವರು!

ಕಾರ್ವರನ ಮೊದಲ ಪಾಠವೇ ಹುಡುಗರನ್ನು ಆಕರ್ಷಿಸಿತು. ಕಣ್ಣು ಕಿವಿ ತೆರೆದಿಟ್ಟರೆ ಪ್ರಕೃತಿಯೇ ಅತ್ಯುತ್ತಮ ಪಾಠ ಕಲಿಸು ವುದು ಎಂದು ಹೇಳಿದ. ಪ್ರಯೋಗಶಾಲೆ ನಿರ್ಮಿಸೋಣ ಎಂದು ಹುಡುಗರೊಡನೆ ಊರು ಸುತ್ತಿದ. ಬೇಡವೆಂದು ಎಸೆದಿದ್ದ ಬಾಟಲು, ಟಿನ್ನು, ಪೆಟ್ಟಿಗೆ ಮಡಕೆಗಳನ್ನು ಸಂಗ್ರಹಿಸಿ ತಂದರು. ಎಲ್ಲವನ್ನೂ ಶುದ್ಧಗೊಳಿಸಿದರು. ಲಾಟೀನು ಕಪ್ಪುಗೊಳಿಸಿ ಒಂದು ರಂಧ್ರದಿಂದ ಬೆಳಕು ಬರುವಂತೆ ಮಾಡಿ ಸೂಕ್ಷ್ಮ ದರ್ಶಕಕ್ಕೆ ಬೆಳಕು ಒದಗಿಸಿದರು! ಇಂಕ್ ಬಾಟಲು ಬುನ್ಸನ್ ಬರ್ನ



ವಾಷಿಂಗ್‌ಟನ್ ಕಾರ್ವರನ ಪ್ರತಿಕೃತಿ

ರಾಯಿತು. ಬಾಟಲುಗಳಲ್ಲಿ ರಾಸಾಯನಿಕಗಳು ತುಂಬಿದುವು. ಟಿನ್‌ಗಳ ತಳಗಳಿಗೆ ತೂತುಗಳನ್ನು ಮಾಡಿ ಮಣ್ಣು ಸೋಸುವ ಜರಡಿ ಮಾಡಿದರು. ಈ ಹಳೆಯ ಬಾಟಲು, ಟಿನ್ನುಗಳಿಂದಲೆ ಕಾರ್ವರ್ ಅಲಬಾಮಾ ರಾಜ್ಯವನ್ನೆ ಪುನರುಜ್ಜೀವನಗೊಳಿಸಿದ.

ಅನಂತರ ಭೂಮಿಯನ್ನು ಹದ ಮಾಡಿದರು. ಶಿಷ್ಯರಿಗೆ ಎಲೆ, ಮರದ ಕಸ, ಉಗ್ರಾಣದ ಹೊಟ್ಟು, ಅಡುಗೆ ಮನೆಯ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಲು ಹೇಳಿ ಅವನ್ನು ಗುಂಡಿಗಳಲ್ಲಿ ಹಾಕಿ ಮುಚ್ಚಿದ. ಗೊಬ್ಬರವಾಯಿತು. ಅದನ್ನು ಬೆರೆಸಿ, ಒಂದು ಭಾಗ ಹೊಲವನ್ನು ಹದ ಮಾಡಿದರು. ಹುಡುಗರು ಹತ್ತಿ ಬಿತ್ತಲು ಹೇಳುತ್ತಾನೆಂದರೆ, ಕಾರ್ವರ್ ದನದ ಮೇವಿನ ಬಟಾಣಿ ಹಾಕಲು ತಿಳಿಸಿದ! ಬೇಸರಗೊಂಡ ಹುಡುಗರು, ಬೆಳೆಯಾಗಿ ಬಂದ ಅತಿ ಚಿಕ್ಕ ಕಾಳುಗಳನ್ನು ನೋಡಿ ನಾಚಿದರು. ಅವನ್ನು ಸಂಗ್ರಹಿಸಿದ ಕಾರ್ವರ್ ಉತ್ತಮವಾದ ಅಡುಗೆ ತಯಾರಿಸಿದ—ಎಷ್ಟು ಚೆನ್ನಾಯಿತು ಎಂಬ ಹೊಗಳಿಕೆ ಬೇರೆ! ಮುಂದಿನ ಬೆಳೆಯಾಗಿ ಸಿಹಿ ಆಲೂಗಡ್ಡೆ ಆರಿಸಿದಾಗ, ಹತ್ತಿಯನ್ನೇಕೆ ಬಿತ್ತಬಾರ ದೆಂದುಕೊಂಡರೂ ಹುಡುಗರು ಮೌನ ವಹಿಸಿದರು. ಆದರೆ ಆಗೋ! ಎಕರೆಗೆ ಅದ್ಭುತ ಇಳುವರಿ. ಕಾರ್ವರನ ಕ್ಲಾಸಿಗೆ ಇನ್ನಷ್ಟು ಜನ ಸೇರಿದರು.

ವಸಂತ ಬಂತು. "ನಾನು ಬೆಳೆ ಪರಿವರ್ತನೆ ಮಾಡುತ್ತಿದ್ದೆ, ಮಕ್ಕಳೆ. ಈಗ ಮಣ್ಣು ಪುಷ್ಟಿ ಹೊಂದಿದೆ, ಹತ್ತಿ ಬೆಳೆಯೋಣ"

ಎಂದ ಕಾರ್ವರ್. ಮಣ್ಣು-ಗೊಬ್ಬರ ಬೆಳವಣಿಗೆಗಳ ಬಗ್ಗೆ ತನ್ನ ವಿಚಾರ ಹೇಳಿದ. ಸಾರವಿದ್ದಷ್ಟೇ ಬೆಳೆ ಎಂಬುದು ಅವನ ತತ್ವ. ಹುಡುಗರಿಗೆ ಖುಷಿ. ಹತ್ತಿ ಬೆಳೆ ಅದ್ಭುತವಾಗಿ ಬಂತು. ಎಕರೆಗೆ ಐನೂರು ಬೇಲ್! ದೂರದ ಊರುಗಳಿಂದಲೂ ರೈತರು ಬಂದು ನೋಡಿದರು. ಪ್ರೊಫೆಸರನ ಮೇಲಿದ್ದ ಅಪನಂಬಿಕೆ ಮಾಯ! ತನ್ನವರಿಂದ ಗೌರವ.

ಬೇಗದಲ್ಲೆ ಶಾಲೆಗೆ ಬೇಕಾಗುವ ತರಕಾರಿ ತಾವೇ ಬೆಳೆದರು. ಸುತ್ತಣ ಮಣ್ಣು, ಸಸ್ಯಮಾದರಿಗಳನ್ನು ಹುಡುಕಿ ದೀರ್ಘ ಕಾಲ ಅಲೆದಾಡಿದ ಕಾರ್ವರ್. ಪ್ರಕೃತಿ ಮಾನವನ ಎಲ್ಲ ಆವಶ್ಯಕತೆಗಳನ್ನೂ ಪೂರೈಸುವುದು, ಸಸ್ಯವಿರುವಾಗ ಯಾರೂ ಹಸಿದಿರಬೇಕಾದ್ದಿಲ್ಲ ಎಂಬುದು ಕಾರ್ವರನ ಸೂಕ್ತಿ. ಕಳೆಗಳು, ಹುಲ್ಲುಗಳಲ್ಲೂ ವೈಟಮಿನ್‌ಗಳು ತುಂಬಿವೆ. ತನ್ನ ಬಳಿ ಬಂದ ರೋಗಿಗಳನ್ನು ಕಾರ್ವರ್ ಕಾಡುಹುಲ್ಲುಗಳ ಕಷಾಯದಿಂದ ಗುಣಪಡಿಸುತ್ತಿದ್ದ.

ಬೆಣ್ಣೆ ತೆಗೆಯುವ ಯಂತ್ರ, ಹಾಲು ಪರೀಕ್ಷೆ ಸಾಧನ, ಒಂದು ಕುದುರೆ ನೇಗಿಲು, ತೋಟದ ಉಪಕರಣಗಳನ್ನು ಒಂದು ಗಾಡಿಯಲ್ಲಿ ಜೋಡಿಸಿಕೊಂಡು, ಕಾರ್ವರ್ ಸಂಚಾರಿ ಕೃಷಿಶಾಲೆಯನ್ನು ನಡೆಸಿದ. ಬಡವರಾದ ತನ್ನವರಿಗೆ ಕೃಷಿ ವಿಧಾನಗಳನ್ನು ಕಲಿಸಲು ಅವರಿರುವಲ್ಲಿಗೇ ಹೋದ. ಮನೆಗಳ ಗುಂಪು, ಸಂತೆಗಳಲ್ಲಿ ಶಾಲೆ ನಡೆಸಿ ಹೆಂಗಸರಿಗೆ ಅಡುಗೆಯ ಸರಳ ವಿಧಾನ, ಬಟ್ಟೆ ಒಗೆಯುವುದು, ಹಿಟ್ಟಿನ ಚೀಲಗಳಿಂದ ಪರದೆ, ಜೋಳದ ದಂಟಿನಂಥ ಹುಲ್ಲಿನಿಂದ ರಗ್ಗುಗಳ ತಯಾರಿ—ಹೀಗೆ ಸುತ್ತ ಸಿಗುವ ವಸ್ತುಗಳಿಂದಲೇ ಅನುಕೂಲತೆಗಳನ್ನು ಮಾಡಿಕೊಳ್ಳುವುದನ್ನು ತೋರಿಸಿದ. ಪ್ರಕೃತಿಯ ಎಲ್ಲ ವಸ್ತುಗಳನ್ನೂ ಪುನಃ ಪುನಃ ರಿಸೈಕಲ್ ಮಾಡಿ ಉಪಯೋಗಿಸಬಹುದು ಎಂದ.

ಪೌಷ್ಟಿಕ ಆಹಾರದ ಬಗ್ಗೆ ರಾಸಾಯನಿಕ ಹಿನ್ನೆಲೆಯಲ್ಲಿ ಚಿಂತಿಸಿದ ಕಾರ್ವರ್. ಹಳೆ ಆಹಾರವಿಧಾನಗಳ ವಿರುದ್ಧ ಹೋರಾಡಿದ. ಆಗ ನೀಗ್ರೋಗಳ ಆಹಾರ ಮಾಂಸ ಹಾಗೂ ಕಾಕಂಬಿ. ದುರ್ಬಲರಾಗಿ ಪಿಲೆಗ್ರದಿಂದ ಸಾಯುತ್ತಿದ್ದರೂ ತರಕಾರಿ ತಿನ್ನುತ್ತಿರಲಿಲ್ಲ. ಕಾರ್ವರ್ ಅವರಿಗೆ ತಾನೇ ಟೊಮೆಟೊ ತಿಂದು ತಾನು ಸಾಯಲಿಲ್ಲ ಎಂದು ತೋರಿಸುತ್ತಿದ್ದ. ಅದನ್ನು ತಿಂದರೆ ಸ್ಕರ್ವಿ ಬಾರದು ಎಂದ. ಶಾಲೆಯಲ್ಲಿ ಬೆಳೆಸಿದ ಅಗಾಧ ತರಕಾರಿ ತೋಟ ತೋರಿಸಿ, ತರಕಾರಿ ಬೆಳೆದರೆ ಮಣ್ಣು ಸಡಿಲಾಗಿ ಗಾಳಿ ನೀರು ಒಳಹೋಗುವುದು ಮಾತ್ರವಲ್ಲ, ಮಣ್ಣಿನ ಫಲವತ್ತತೆ ಹೆಚ್ಚುವುದೆಂದ. ಹೊಸಹೊಸ ಅಡುಗೆ ಹೇಳಿಕೊಟ್ಟು, ಅವನ್ನು ಬಂದವರಿಗೆ ತಿನ್ನಿಸಿ, ಮನೆಗೆ ಹೋಗಿ ಪ್ರಯೋಗಮಾಡುವ ಹುಮ್ಮಸ್ಸು ಹುಟ್ಟಿಸಿದ.

ಗೆಣಸು ಬೆಳೆಯಿರಿ—ಗೆಡ್ಡೆ ಊಟಕ್ಕಾದರೆ, ಬಳ್ಳಿಗಳು, ಸಿಪ್ಪೆ ಹಂದಿಗಾಗುತ್ತವೆ. ಎರಡು ಬೆಳೆ ಆಲೂಗಡ್ಡೆ ಹಾಕಿದರೆ ಅನಂತರ ಹತ್ತಿ ಚೆನ್ನಾಗಿ ಬರುತ್ತದೆ. ದಿನವೂ ಒಂದು ಹಣ್ಣು ತಿಂದರೆ ಆರೋಗ್ಯಕ್ಕೆ ಅತ್ಯುತ್ತಮ ಎಂದು ಹೇಳಿಕೊಟ್ಟ. ತರಕಾರಿಗಳನ್ನು ಒಣಗಿಸಿ ಇಡೀ ವರ್ಷ ಬಳಸುವುದು, ಮಾಂಸ ಕೆಡದಂತಿಡುವುದು ಇತ್ಯಾದಿ ವಿಧಾನಗಳನ್ನು ಕಲಿಸಿದ. ಯಾವುದೂ ತ್ಯಾಜ್ಯವಲ್ಲ ಎಂಬುದು ಕಾರ್ವರನ ಸೂಕ್ತಿ. ಸ್ವಲ್ಪ ಯೋಚಿಸಿದರೆ ಬಳಸುವ ವಿಧಾನ ತಿಳಿಯುವುದು. ಆತ ಯಾವಾಗಲೂ ಎಸೆಯುವುದರ ವಿರುದ್ಧ. ಹಿಂದೆ ಎಸೆಯುತ್ತಿದ್ದ ಹಂದಿತುಪ್ಪವನ್ನು ಬಳಸಿ ಸೋಪು ತಯಾರಿಸಿದ. ಆಲೂಗಡ್ಡೆ ಒಣಗಿಸಿ, ಹಿಟ್ಟು ಮಾಡಿದ. ಹೂಗಿಡಗಳನ್ನು ಮನೆಸುತ್ತ ಬೆಳೆದರೆ ಮನಸ್ಸಿಗೆ ಉಲ್ಲಾಸ ಬರುತ್ತದೆ ಎಂದ.

ನಿಧಾನವಾಗಿ ಜನ ಚಾವಣಿ ಹಾಕುವುದು, ಸುಣ್ಣ ಹೊಡೆಯುವುದು, ಚಾಪೆ ಹೆಣೆಯುವುದು, ಕಾಯಿಲೆಯವರಿಗೆ ಸೇವೆ ಮಾಡುವುದು, ಅಡುಗೆ ಇತ್ಯಾದಿಗಳನ್ನು ಕಲಿತರು. ಅಲಬಾಮಾಕ್ಕೆ ಹೊಸ ಕ್ರಾಂತಿಕಾರಿ ಕಳೆ ಬಂತು—ಜನರ ಮುಖಗಳಲ್ಲಿ ಭರವಸೆಯ ಜೀವ ತುಂಬಿತು. ಅರ್ಥ ಕಾಣಲು ತೊಡಗಿತು. ಇತರ ರಾಜ್ಯಗಳಿಂದಲೂ ಕಾರ್ವರನ ಪ್ರದರ್ಶನಕ್ಕೆ ಕರೆ ಬಂತು. ತನ್ನ ಪ್ರದರ್ಶನ ವಸ್ತುಗಳನ್ನು ಕಳಿಸಿದ, ಕೆಲವೊಮ್ಮೆ ಹೋಗಿ ಬಂದ. ಕ್ರಮೇಣ ರಷ್ಯಾ, ಜಪಾನ್, ಭಾರತ, ಆಫ್ರಿಕಾಗಳಿಂದಲೂ ಅವನ ಕೀರ್ತಿ ಕೇಳಿದ ಆಸಕ್ತರು ಶಾಲೆಗೆ ಬಂದು ಹೋದರು. ಕಾರ್ವರ್ ತನ್ನ ಸಂಚಾರಿ ಶಾಲೆಯ ಕೆಲಸವೇ ಮುಖ್ಯ ಎಂದು ತಿಳಿದ. ಪ್ರಯೋಗದ ಉದ್ದೇಶ ಕರಿಯರು ಬಿಳಿಯರು ಎಲ್ಲರ ಪ್ರಯೋಜನವೇ ಆಗಿತ್ತು.

ಕಾರ್ವರ್ ನೆಲಗಡಲೆಯ ಮಹತ್ವವನ್ನರಿತು ಅದನ್ನು ಬೆಳೆದು ಬಳಸಲು ಹೇಳಿದ. ಒಂದು ಮುಷ್ಟಿ ನೆಲಗಡಲೆ ಪ್ರತಿದಿನ ತಿಂದರೆ ಆರೋಗ್ಯಪೂರ್ಣ ಶರೀರ ನಿಮ್ಮದಾಗುವುದು ಎಂದ. ಆದರೆ ಅದು ಹಂದಿಯ ಆಹಾರ! ಮನುಷ್ಯರು ತಿಂದಾರೆಯೆ? ತನ್ನ ವಿದ್ಯಾರ್ಥಿಗಳನ್ನು ಒಲಿಸಿ, ಕಾರ್ವರ್ ಶಾಲೆಯ ಹೊಲದಲ್ಲಿ ಸೇಂಗಾ ಬೆಳೆದ. ಅತಿ ಅಗ್ಗದ ಈ ಬೆಳೆ ಮಣ್ಣನ್ನೂ ಬೆಳೆಗಾರರನ್ನೂ ಶ್ರೀಮಂತರಾಗಿಸುವುದು. ಅದರ ಕ್ರೀಂ, ಕೃತಕ ಮಾಂಸ, ಕೃತಕ ಬ್ರೆಡ್, ಸಾಲಡ್ ಐಸ್‌ಕ್ರೀಂಗಳನ್ನು ಮಾಡುವ ವಿಧಾನ ಕಾರ್ವರ್ ಕಂಡುಕೊಂಡ. ಅದನ್ನು ತಿಂದು ತೃಪ್ತಿಪಟ್ಟವರು ಅದು ಸೇಂಗಾದ್ದೆಂದು ಅರಿತಾಗ ಆಶ್ಚರ್ಯಪಟ್ಟರು. ಬೋರ್ ವೀವಿಲ್ ಮಿಡತೆಯಿಂದ ರಾಜ್ಯದ ಎಲ್ಲ ಹತ್ತಿಬೆಳೆ ಹಾಳಾದಾಗ, ಕಾರ್ವರ್ ಹತ್ತಿಗಿಡ ಸುಟ್ಟು, ಸೇಂಗಾ, ಬಟಾಣಿ ಅಥವಾ ಆಲೂಗಡ್ಡೆ ಬೆಳೆಯಲು ಹೇಳಿದ. ಮೊದಲು ಕೇಳದಿದ್ದರೂ ರೈತರು ಕ್ರಮೇಣ ಹತ್ತಿಹುಳದ ಹತೋಟಿಗಾಗಿ ಸೇಂಗಾ ಬೆಳೆದರು. ಬೆಳೆದು, ಸೇಂಗಾ ಗುಡ್ಡಗಳೇ ನಿರ್ಮಾಣವಾದುವು.

ಈಗ ಎಲ್ಲ ರೈತರು ಸೇಂಗಾವನ್ನು ಏನು ಮಾಡೋಣ ಎಂದು ಕೇಳಿದರು. ಕಾರ್ವರನಿಗೆ ಉತ್ತರ ಗೊತ್ತಿರಲಿಲ್ಲ. ಸಂಕಟದಿಂದ ಆತ ತನ್ನ ಏಕಾಂತದ ಜೌಗಿಗೆ ಹೋದ. ತಲೆ ತಿನ್ನುವ ಸಮಸ್ಯೆ ಬಂದಾಗಲೆಲ್ಲ ಸೃಷ್ಟಿಕರ್ತನ ಜತೆ ಸಂವಾದಿಸುತ್ತಿದ್ದ. ಈಗಲೂ, ಸೇಂಗಾವನ್ನೇಕೆ ಸೃಷ್ಟಿಸಿದೆ ಎಂದು ದೇವರನ್ನು ಕೇಳಬಯಸಿದ. ಸಂಜೆಯ ನೀರವತೆಯಲ್ಲಿ ತನ್ನೊಳಗಿನ ದನಿಯನ್ನು ಕೇಳುತ್ತ ಕುಳಿತ ಆತ ಸ್ಫೂರ್ತಿ ಬಂದೊಡನೆ ಸರಸರನೆ ಹೋಗಿ, ಯಾರನ್ನೂ ಒಳಗೆ ಬಿಡಬಾರದೆಂದು ಅಪ್ಪಣೆ ಮಾಡಿ,

ಪ್ರಯೋಗಶಾಲೆಯ ಒಳಹೊಕ್ಕ. ದೇವರು ದಾರಿತೋರಿಸಿದ್ದ! ಕಾರ್ವರ್ ಸೇಂಗಾದಿಂದ ಬೆಣ್ಣೆ, ಹಾಲು, ಎಣ್ಣೆ, ಮಾರ್ಗರೀನ್, ಸೋಪು ಹಾಗೂ ಶೃಂಗಾರ ಸಾಧನಗಳನ್ನು ಸಂಶೋಧಿಸಿದ. ಕ್ರಮೇಣ ಸಿಹಿಹಿಟ್ಟು, ಇಂಕು, ಬಣ್ಣಗಳು, ಶೂಪಾಲಿಶ್, ಕ್ರಿಯೋಸೋಟ್ (ಒಂದು ಬಗೆಯ ಎಣ್ಣೆ), ಕರಗಿಸುವ ದ್ರವ, ಶೇವಿಂಗ್ ಕ್ರೀಂಗಳನ್ನು ತಯಾರಿಸಿದ. ಕೆಂಪು ಸಿಪ್ಪೆಯಿಂದ ಉತ್ತಮ ಕಾಗದ, ಹೊರಕವಚದಿಂದ ಮಣ್ಣಿನ ಸಾರವರ್ಧಕ, ವಿದ್ಯುತ್ ನಿರೋಧಕ ಮತ್ತು ಸಂಶ್ಲೇಷಿತ ಅಮೃತಶಿಲೆಗಳನ್ನು ಮಾಡಿದ.

ದೇವರು ನಮಗೆ ಮೂರು ರಾಜ್ಯಗಳನ್ನಿತ್ತಿದ್ದಾನೆ—ಸಸ್ಯ, ಪ್ರಾಣಿ ಹಾಗೂ ಖನಿಜ ಎನ್ನುತ್ತಿದ್ದ ಕಾರ್ವರ್. ಆ ಪಟ್ಟಿಗೆ ಸಂಶ್ಲೇಷಿತ ವಸ್ತುಗಳ ರಾಜ್ಯವನ್ನೂ ಸೇರಿಸಿದ. ಈ ಸಂಶೋಧನೆಗಳು ಕೈಗಾರಿಕೆಗಳಲ್ಲಿ ಹೊಸ ಕ್ರಾಂತಿಯನ್ನು ತಂದಿತು. ಕಾಡನ್ನು ನಾಶಮಾಡುವ ಬದಲು ಹೊಲಗಳ ತ್ಯಾಜ್ಯಗಳಿಂದ ತಮ್ಮ ಕಚ್ಚಾವಸ್ತುವನ್ನು ಪಡೆಯಬಹುದೆಂದ. ಇದು ಪ್ಲಾಸ್ಟಿಕ್ಕುಗಳ ನಿರ್ಮಾಣಕ್ಕೆ ನಾಂದಿ ಹಾಡಿತು. ವಾಹನ ಉದ್ಯಮದವರು ಉಕ್ಕಿನ ಬದಲು ಸೆಲ್ಯುಲೋಸ್ ಅನ್ನು ಬಳಸುವಂತಾಯ್ತು.

ಕಾರ್ವರ್ ಒಬ್ಬನೇ ಮಾಡಿದ ಕೆಲಸ ಮುಂದುವರೆಸಲು ಈಗೆಷ್ಟು ವಿಜ್ಞಾನಿಗಳು, ಪ್ರಯೋಗಶಾಲೆಗಳು! ಕೆಲಸ ಮುಗಿದ ಮೇಲೆ ಮುಂಜಾನೆ ಆತ ತನ್ನ ಸೃಷ್ಟಿಕರ್ತನಿಗೆ ಅಭಿನಂದನೆ ಸಲ್ಲಿಸಲು ನಡೆದುಹೋದ. ತನ್ನ ಸಾವಿನ ಮೊದಲು ಬರಿಯ ಸೇಂಗಾದಿಂದ ಆತ ನಿರ್ಮಿಸಿದ ವಸ್ತುಗಳು ಮುನ್ನೂರ ಇಪ್ಪತ್ತೈದು! ಪೇಯಗಳು, ಉಪ್ಪಿನಕಾಯಿ, ಮರದ ತೂತು ಮುಚ್ಚುವ ವಸ್ತು, ಕೃತಕ ರಬ್ಬರ್ ಇವುಗಳಲ್ಲಿ ಸೇರಿವೆ. ಅವನ ವಿಧಾನಗಳನ್ನು ಅನುಸರಿಸಿ ಈಗ ಕಾರ್ಖಾನೆಗಳು ಎಷ್ಟೊಂದು ವಸ್ತುಗಳನ್ನು ನಿರ್ಮಿಸುತ್ತಿವೆ!—ಇನ್‌ಸ್ಟಂಟ್ ಕಾಫಿ, ಚೀಸ್, ಚಟ್ನಿಗಳು, ಸಾಸ್‌ಗಳು, ಶಾಂಪೂ, ಗ್ರೀಸ್, ಲೋಹದ ಪಾಲಿಶ್, ಅಂಟುಗಳು, ಪ್ಲಾಸ್ಟಿಕ್‌ಗಳು, ಗೋಡೆಯ ಬೋರ್ಡ್ ಇತ್ಯಾದಿ.

ಎಲ್ಲ ಸಸ್ಯಗಳೂ ಅಳಿದು ಬರಿಯ ಸೇಂಗಾ, ಆಲೂಗಡ್ಡೆ ಮಾತ್ರ ಉಳಿದರೂ ಮಾನವ ಇವೆರಡರಿಂದಲೇ ಜೀವಿಸಬಹುದು ಎಂದ ಕಾರ್ವರ್. ಸೇಂಗಾ ಔಷಧೀಯ ಗುಣವುಳ್ಳದ್ದು ಎಂದ ಕಾರ್ವರ್. ಅದರ ಸೃಷ್ಟಿಯಲ್ಲಿ ದೇವರು ಒಂದು ಉದ್ದೇಶ ಹೊಂದಿದ್ದಾನೆ ಎಂದು ನಂಬಿದ್ದ. ಸೇಂಗಾ ಉತ್ಪಾದನೆಯಿಂದಲೇ ಅಮೆರಿಕದ ಆರ್ಥಿಕ ಸಂಪತ್ತು ಬದಲಾಗಿ ಹೋಯಿತು—ಒಬ್ಬ ಮಹಾನ್ ವ್ಯಕ್ತಿಯ ಕಾಣ್ಕೆಯಿಂದ ಇದು ಸಾಧ್ಯವಾಯಿತು.

ಅನಂತರ ಕಾರ್ವರ್ ಗೆಣಸಿನತ್ತ ದೃಷ್ಟಿ ಹರಿಸಿ ನೂರಹದಿನೆಂಟು ಪದಾರ್ಥಗಳನ್ನು ನಿರ್ಮಿಸಿದ. ಮುಂಜಾನೆಯ ತಿಂಡಿಗಳು, ಶುಂಠಿಪುಡಿ ಇವು ಕೆಲವು. ಗೆಣಸಿನ ಪುಡಿಯನ್ನು ಬೆರೆಸಿ ಮಾಡಿದ ಬ್ರೆಡ್ಡು ಹೆಚ್ಚು ಸ್ವಾದಿಷ್ಟ. ಯುದ್ಧ ಕಾಲದಲ್ಲಿ ಈ ಪುಡಿ ಹಸಿದ ಸಹಸ್ರಾರು ಜನಕ್ಕೆ ಗೋಧಿಯ ಬದಲು ಆಹಾರವಾಯ್ತು.

ಹತ್ತಿಕಾಂಡದಿಂದ ಬೋರ್ಡ್, ಪೇಪರ್, ಬಟ್ಟೆಗಳನ್ನು ನಿರ್ಮಿಸಿದ. ಪೀಕನ್ ಮರ, ಸೋಯಾಬೀನ್, ಬಟಾಣಿ, ಕಾಡು ಪ್ಲಮ್‌ಗಳಿಂದ ನೂರಾರು ವಸ್ತುಗಳನ್ನು ತಯಾರಿಸಿದ. ಹುಲಿ, ವಿಷಕೀಟಗಳಿಂದ ಹಸು ಸಾಕಲಾರದಿದ್ದ ಆಫ್ರಿಕಾದ ಕಾಡುಗಳಲ್ಲಿ ವಾಸಿಸುತ್ತಿದ್ದ ಜನರ ಮಕ್ಕಳಿಗೆ ಕಾರ್ವರ್ ಮೇಲ್ವಿಚಾರಣೆಯಲ್ಲಿ ತಯಾರಿಸಿದ ಸೇಂಗಾ ಹಾಲು ವರದಾನವಾಯ್ತು. ಕಿತ್ತಳೆ ರಸದಿಂದ ಮಾಂಸದ ತುಂಡುಗಳನ್ನು ಮೃದುಗೊಳಿಸುವ ದ್ರವವೊಂದನ್ನು ತಯಾರಿಸಿದ. ಇದುವರೆಗೆ ಮಾಂಸವನ್ನು ಮೃದುಗೊಳಿಸಲಾಗಿರಲಿಲ್ಲ.

ಮಣ್ಣಿನ ಕೊರತೆ ಸಸ್ಯರೋಗಗಳನ್ನು ನಿವಾರಿಸಲು ಅವನ ಸಹಾಯವನ್ನು ಕೋರಲಾಯಿತು. "ದೇವರು ಬೆಳೆಸಿದ ಬೆಳೆಯ ಕೊರತೆ ನಿವಾರಿಸಲು, ಗುಣಪಡಿಸಲು ನಾನು ಹಣ ತೆಗೆದುಕೊಳ್ಳಲಾರೆ" ಎಂದು ತನ್ನ ಸಲಹೆಯನ್ನು ಉಚಿತ ನೀಡಿದ. ದೇವರ ಯೋಜನೆಗಳಿಗೆ ಉಪಕರಣವಾಗಿ ದುಡಿಯುವುದು ಅವನ ನಿಲುವಾಗಿತ್ತು. ಎಲ್ಲ ಕೆಲಸಗಳೂ ತುಂಬ ಆಳವಾದ ಪರಿಣಾಮ ಬೀರಿದುವು. ಕಾರ್ವರನ ಜೀವನವೇ ಒಂದು ನಿವೇದನೆ, ಎಲ್ಲವನ್ನೂ ಎಲ್ಲರಿಗಾಗಿ ಕೊಡುವ ಸಮರ್ಪಣೆ. ಬೂಕರ್ ಕಾರ್ವರನ ಸಂಬಳ ಹೆಚ್ಚಿಸಿದಾಗ "ಹಣದಿಂದ ನಾನೇನು ಮಾಡಲಿ?" ಎಂದು ನಿರಾಕರಿಸಿದ.

ಬೂಕರ್ ಸತ್ತಾಗ ಅವನ ಸಾವು ಕಾರ್ವರನಿಗೆ ವೈಯಕ್ತಿಕ ನಷ್ಟವಾಯಿತು. ಆದರೂ ಮಾತು ಕೊಟ್ಟಿದ್ದಂತೆ ಟಸ್ಕೆಗೀಯಲ್ಲೆ ಉಳಿದ. ಅವನ ಬೈಬಲ್ ಕ್ಲಾಸುಗಳು, ಭಾನುವಾರ ಮಧ್ಯಾಹ್ನ ಹುಡುಗರು ಅವನ ರೂಮಿಗೆ ಹೋದಾಗ ಹೇಳುವ ಮಾತುಗಳು ರೋಚಕವಾಗಿದ್ದುವು. ವಿಜ್ಞಾನ ಹಾಗೂ ಧಾರ್ಮಿಕ ಗ್ರಂಥಗಳ ನಡುವಿನ ಸಂಬಂಧ ಆತನ ಜಿಜ್ಞಾಸೆಯ ವಿಷಯ. "ದೇವರು ಎಲ್ಲೆಲ್ಲೂ ಇರುವ. ನಮಗೆ ಅರ್ಥವಾಗದ ವಿಷಯಗಳು ನಿಗೂಢತೆಗಳು ಇರುವುದು ನಾವು ಅವಕ್ಕೆ ಸರಿಯಾಗಿ ಶ್ರುತಿಗೊಳ್ಳುವುದನ್ನು ಕಲಿಯದೆ ಇರುವುದರಿಂದ ಇವೆ. ಸೃಷ್ಟಿಕರ್ತನ ಮೇಲೆ ನಂಬಿಕೆ ಇರಿಸುವುದೇ ರಹಸ್ಯ ಭೇದನೆ" ಎನ್ನುತ್ತಿದ್ದ.

ಕಾರ್ವರ್ ತನ್ನ ಸಂಬಳದ ಹಣ ಡ್ರಾ ಮಾಡುವುದನ್ನೆ ಮರೆಯುತ್ತಿದ್ದ. ಚೆಕ್ಕುಗಳು ಹಾಗೆಯೇ ಬಿದ್ದಿರುತ್ತಿದ್ದವು. ಕೊನೆಗೆ ಅವು ಬಡ ವಿದ್ಯಾರ್ಥಿಗಳಿಗೆ ಮೀಸಲಾದುವು. ಅವನ ವಿಧಾನಗಳನ್ನು ಅನುಸರಿಸಿ ಅಲಬಾಮಾ ರಾಜ್ಯ ಅವನ ಕಣ್ಣೆದುರೇ ಸಂಪದ್ಭರಿತವಾಯಿತು. ಸಸ್ಯರೋಗ ನಿವಾರಣೆಯಲ್ಲಿ ಅವನು ತುಂಬ ಪ್ರಸಿದ್ಧನಾದ. ಬದುಕಿದ್ದಾಗಲೇ ಕಾರ್ವರ್ ದಂತಕತೆಯಾದ. "ಕಾಣ್ಕೆ ಎಲ್ಲಿ ಇಲ್ಲವೋ ಅಲ್ಲಿ ಜನ ನಾಶವಾಗುತ್ತಾರೆ" ಎನ್ನುತ್ತಿದ್ದ. ಕೆಲವು ಕಳೆಗಳನ್ನು ತೆಗೆದುಕೊಂಡು, "ಇವುಗಳಲ್ಲಿರುವ ರಾಸಾಯನಿಕಗಳೇ ನಾನು ಪಟ್ಟಣದಿಂದ ತಂದ ಏಳು ಪೇಟೆಂಟ್ ಪಡೆದ ಔಷಧಗಳಲ್ಲಿ ಇವೆ. ಆ ಔಷಧಿಗಳು ನ್ಯೂಯಾರ್ಕಿನಿಂದ ಬಂದಿವೆ. ಇಲ್ಲೇ ಏಕೆ ತಯಾರಿಸಿ ನ್ಯೂಯಾರ್ಕಿಗೆ ಕಳಿಸಬಾರದು?" ಎಂದು ಅಚ್ಚರಿಪಡುತ್ತಿದ್ದ.

ರಷ್ಯಾ ೧೯೩೦ರಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯ ಕೃಷಿವಿಭಾಗದಲ್ಲಿ ಸಹಾಯ ಮಾಡಲು ಕೇಳಿದಾಗ, ಕಾರ್ವರ್ ತನ್ನ ಸಹಾಯಕರೊಬ್ಬರನ್ನು ಕಳಿಸಿದ. "ಹಂದಿಯನ್ನು ಬೆಳೆಸುವುದು ಹೇಗೆ" ಮುಂತಾಗಿ ನಲವತ್ತಾರು ದೀರ್ಘ ಲೇಖನಗಳನ್ನೂ ೧೯೪೨ರಲ್ಲಿ "ಶಾಂತಿ, ವಿಜಯಗಳಿಗಾಗಿ ಪ್ರಕೃತಿಯ ತೋಟ" ಎಂಬ ಅತಿ ಜನಪ್ರಿಯ ಪುಸ್ತಕವನ್ನೂ ಬರೆದ.

ಅವನಿಗೆ ಹೊಗಳಿಕೆ ಆಗುತ್ತಿರಲಿಲ್ಲ. "ನಾನಿಲ್ಲದಿದ್ದರೆ, ದೇವರು ತನ್ನ ಕೆಲಸಕ್ಕೆ ಬೇರೆ ಇನ್ನೊಬ್ಬರನ್ನು ಹುಡುಕಿಕೊಳ್ಳುತ್ತಿದ್ದ" ಎನ್ನುವನು. ಆದರೂ ಅವನಿಗೆ ಸಮಾಜ ಅನೇಕ ಗೌರವಗಳನ್ನು ಇತ್ತು ಸನ್ಮಾನಿಸಿತು. ಸಿಂಪ್ಸನ್ ಕಾಲೇಜಿನ ಡಾಕ್ಟರೇಟ್, ರಾಯಲ್ ಸೊಸೈಟಿಯ ಸದಸ್ಯತ್ವ, ಕಪ್ಪುಜನರ ಅಭಿವೃದ್ಧಿ ಸಂಸ್ಥೆಯ ಸ್ಪಿಂಗಾರ್ನ್ ಪದಕ, ರೋಚೆಸ್ಟರ್ ವಿಶ್ವವಿದ್ಯಾಲಯದ ಡಿ.ಎಸ್‌ಸಿ ಪದವಿ, ರೂಸ್‌ವೆಲ್ಟ್ ಪದಕ ಇತ್ಯಾದಿ. ಪ್ರಸಿದ್ಧ ಸಂಸ್ಥೆಗಳು ದೊಡ್ಡಮೊತ್ತದ ಸಂಬಳ ಕೊಡುವುದಾಗಿ ಕರೆದುವು. ಯಾರೊಬ್ಬರ ಸೇವೆ ಮಾಡುವ ಬದಲು ಇಡೀ ಮನುಕುಲಕ್ಕೆ ಟಸ್ಕೆಗೀಯಲ್ಲಿದ್ದೇ ಸೇವೆ ಸಲ್ಲಿಸುವೆನೆಂದು ಆತ ಹೇಳಿದ. ಸ್ವೀಡನ್ನಿನ ರಾಜಕುಮಾರ, ಎಡಿಸನ್, ಹೆನ್ರಿ ಫೋರ್ಡ್ ಅವನ ಆತ್ಮೀಯ ಸ್ನೇಹಿತರಾದರು. ಫೋರ್ಡ್ ಕಾರ್ವರನ ಸ್ಫೂರ್ತಿಯುತ ಸಹವಾಸದಲ್ಲಿ ಕಾಲ ಕಳೆಯುತ್ತಿದ್ದ. ಒಬ್ಬರಿಗೆ ಪುಂಖಾನುಪುಂಖವಾಗಿ ಹೊಸ ವಿಚಾರಗಳು ಮೂಡುತ್ತಿದ್ದುವು; ಇನ್ನೊಬ್ಬರಿಗೆ ಅವನ್ನು ಆಚರಣೆಗೆ ತರಲು ಇಚ್ಛಾಶಕ್ತಿ, ಹಣ ಇದ್ದವು—ಇಬ್ಬರೂ ಸೇರಿ ಅಮೆರಿಕದಲ್ಲಿ ಕೈಗಾರಿಕೆಯ ಕ್ಷೇತ್ರದಲ್ಲಿ ಕ್ರಾಂತಿ ತಂದರು.

ಟಸ್ಕೆಗೀ ಸಂಸ್ಥೆಗೆ ಹಣ ಕೂಡಿಸಲು ಆತ ಪಿಯಾನೋ ಕಚೇರಿಗಳನ್ನು ನೀಡುತ್ತ ದೇಶ ತಿರುಗಿದ. ಎಷ್ಟೇ ಪ್ರಸಿದ್ಧನಾದರೂ, ಅಲಬಾಮಾದಲ್ಲಿ ವರ್ಣೀಯ ಕಾನೂನುಗಳು ಅವನು ಕೆಲವೆಡೆ ತಿನ್ನಲು, ವಿಶ್ರಾಂತಿ ಹೊಂದಲು, ಓಡಾಡಲು ಪ್ರತಿಬಂಧಿಸುತ್ತಿದ್ದವು. ತುಂಬಾ ಶ್ರಮಪಟ್ಟು ಆಯಾಸ ಹೊಂದಿದ್ದರೂ, ಕುಳಿತು ವಿಶ್ರಾಂತಿ ಪಡೆಯಲು ಅನೇಕ ಮೈಲು ಹೋಗಬೇಕಿತ್ತು. ವಿಪರೀತ ದಗೆಯ ಬಿಸಿಲಿನ ದಿನಗಳಲ್ಲಿ ಎಲ್ಲ ಅಂತಸ್ತುಗಳನ್ನೂ ಇಳಿದು ಕೆಳಗೆ ಕರಿಯರಿಗೆ ಮಾತ್ರ ಎಂದು ಗುರುತಿಸಿದ ನಲ್ಲಿಗಳಿಂದ ನೀರು ಕುಡಿಯಬೇಕಿತ್ತು. ತುಂಬ ಸಹನೆಯಿಂದ ಈ ಎಲ್ಲ ಅನಾಗರಿಕ ಶ್ರಮಗಳನ್ನು ಆತ ತಾಳಿಕೊಳ್ಳುತ್ತಿದ. ದ್ವೇಷಿಸಲೆಂದು ಅಥವಾ ಅವಮಾನಕ್ಕೆ ಪ್ರತೀಕಾರ ಮಾಡಲೆಂದು ಆತ ಬಂದಿರಲಿಲ್ಲ. "ಇದನ್ನೆಲ್ಲ ವಿರೋಧಿಸುತ್ತ ಕುಳಿತರೆ, ಇತರ ಕೆಲಸಗಳನ್ನು ಮಾಡಲು ಶಕ್ತಿಯೇ ಉಳಿದಿರದು" ಎಂದಾತ ಯೋಚಿಸುತ್ತಿದ್ದ. "ಜೀಸಸ್ ಮೌನದಲ್ಲಿ ನೋವು ಸಹಿಸುತ್ತಿದ್ದನಲ್ಲವೆ?" ಎಂದಾತ ತನ್ನ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ.

ಕೊನೆಯವರೆಗೂ ಕಾರ್ವರ್ ಬಹುಬೇಗ ಎದ್ದು ಕಾರ್ಯತತ್ಪರನಾಗಿ, ತಡವಾಗಿ ಮಲಗುತ್ತಿದ್ದ. ಅವನಿಂದ ಸ್ಫೂರ್ತಿ ಪಡೆದ ಆಸ್ಟಿನ್ ಕರ್ಟಿಸ್ ಎಂಬ ತರುಣ ಕೊನೆಯವರೆಗೂ ಅವನಿಗೆ ಸೇವಕನಾಗಿ, ಸಹಾಯಕನಾಗಿ, ಗುಂಪುಗಳಿಂದ ಅವನನ್ನು ರಕ್ಷಿಸಿ ಎಲ್ಲ ಕೆಲಸ ಮಾಡಲು ನೆರವಾದ.

ಜನವರಿ ೫, ೧೯೪೩ರಂದು ಹಾಸಿಗೆಯಲ್ಲಿ "ಜಗತ್ತಿನಲ್ಲಿ ಶಾಂತಿಯಿರಲಿ, ಎಲ್ಲ ಮಾನವರಿಗೂ ಶುಭವಾಗಲಿ" ಎಂಬ ಬರಹವಿದ್ದ ಕ್ರಿಸ್‌ಮಸ್ ಕಾರ್ಡನ್ನು ಬರೆಯುತ್ತ ಕಾರ್ವರ್ ನಿಧನನಾದ. ಶರಣರ ಗುಣವನ್ನು ಮರಣದಲ್ಲಿ ಕಾಣು ಎಂಬಂತೆ ಅವನ ಇಡೀ ಜೀವನದ ಸಂದೇಶ ಅವನ ಮರಣದಲ್ಲಿತ್ತು.

ಅಧ್ಯಕ್ಷ ರೂಸ್‌ವೆಲ್ಟ್ ಆತನ ಪರಿಚಯವಿದ್ದುದು ತಮ್ಮ ಸೌಭಾಗ್ಯ ಎಂದರು. ಹುಡುಗನಾಗಿದ್ದಾಗ ತನ್ನ ಕೈಹಿಡಿದು ಸಸ್ಯಗಳ ಹೂಗಳ ರಹಸ್ಯವನ್ನು ತಿಳಿಸಿಕೊಟ್ಟಿದ್ದ ಕಾರ್ವರ್‌ನನ್ನು ದುಃಖದಿಂದ ನೆನಪಿಸಿಕೊಂಡ ಉಪಾಧ್ಯಕ್ಷ ಹೆನ್ರಿ ವ್ಯಾಲೇಸ್, ಅಮೆರಿಕ ಅತ್ಯುತ್ತಮ ಕ್ರೈಸ್ತನೊಬ್ಬನನ್ನು ಕಳೆದುಕೊಂಡಿತು ಎಂದರು. ಬಡಜನ ಪ್ರವಾಹದೋಪಾದಿ ಬಂದು ಸಮಾಧಿ ದರ್ಶಿಸಿದರು. ಉನ್ನತ ಚೇತನವನ್ನು ಕಳೆದುಕೊಂಡು ವಿಶ್ವ ಬಡವಾಯಿತು.

ಆತ ಬಾಲ್ಯವನ್ನು ಕಳೆದಿದ್ದ ಮಿಸ್ಸೌರಿಯ ಡೈಮಂಡ್ ಗ್ರೋವಿನಲ್ಲಿ ಕಾರ್ವರ್ ರಾಷ್ಟ್ರೀಯ ಸ್ಮಾರಕ ನಿರ್ಮಿಸಿದರು. ಆ ಸಂದರ್ಭದಲ್ಲಿ ನ್ಯೂಯಾರ್ಕ್ ಟ್ರಿಬ್ಯೂನ್ ಈ ರೀತಿ ಬರೆಯಿತು: "ಎಲ್ಲರೂ ತಿಳಿದಂತೆ ಡಾ. ಕಾರ್ವರ್ ಒಬ್ಬ ನೀಗ್ರೋ. ಆದರೆ ಎಲ್ಲ ಅಡಚಣೆಗಳನ್ನು ಆತ ದಾಟಿದ. ಜನಾಂಗಗಳ ನಡುವೆ ಸಾಮರಸ್ಯದ ಅರಿವು ಮೂಡಿಸಲು ಆತನಿಗಿಂತ ಹೆಚ್ಚಿನ ಉದಾಹರಣೆ ಈ ಶತಮಾನದಲ್ಲಿ ಇಲ್ಲ. ಸೇಂಗಾ, ಗೆಣಸುಗಳ ರಹಸ್ಯ ಗುಣಗಳನ್ನು ಕಂಡುಹಿಡಿಯುವುದಕ್ಕಿಂತ ಹೆಚ್ಚಿನ ಕೆಲಸವನ್ನು ಕಾರ್ವರ್ ಮಾಡಿದ್ದಾನೆ. ಆತ ಅಮೆರಿಕನ್ ಹೃದಯವನ್ನು ವಿಶಾಲಗೊಳಿಸಲು ಸಹಾಯ ಮಾಡಿದ್ದಾನೆ." ಮಾನವಕುಲಕ್ಕೆ ಇಷ್ಟೊಂದು ಒಳಿತು ಮಾಡಿದ ಇನ್ನೊಬ್ಬ ಮನುಷ್ಯನಿಲ್ಲ. ಬೂಕರನ ಪಕ್ಕ ಕಾರ್ವರನನ್ನು ಹೂಳಲಾಗಿದೆ. ಸಮಾಧಿಯ ಮೇಲೆ ಹೀಗೆ ಬರೆದಿದೆ: "ಕೀರ್ತಿಗೆ ಸಂಪತ್ತನ್ನೂ ಆತ ಜೋಡಿಸಿಕೊಳ್ಳಬಹುದಿತ್ತು. ಆದರೆ ಎರಡಕ್ಕೂ ಬೆಲೆಕೊಡದೆ, ವಿಶ್ವಕ್ಕೆ ಸಹಾಯಕನಾಗುವಲ್ಲಿ ತನ್ನ ಸಂತೋಷ ಮತ್ತು ಗೌರವವನ್ನು ಕಂಡುಕೊಂಡ."

ಪುಟ್ಟ, ದುರ್ಬಲ ನೀಗ್ರೋ ಹುಡುಗನೊಬ್ಬ ತನ್ನ ಜೀವನದಿಂದ ಮಾನವನ ಆತ್ಮವನ್ನು ದಮನ ಮಾಡಲಾಗದು ಎಂದು ತೋರಿಸಿಕೊಟ್ಟ. ಸಾಮಾಜಿಕ ಸಮಸ್ಯೆಗಳಾದ ಬಡತನ, ಪೂರ್ವಾಗ್ರಹ, ಬಣ್ಣ ಅಥವಾ ಜಾತಿ—ಎಂಥ ಅಡಚಣೆಗಳೇ ಇರಲಿ ಅವನ್ನು ಧೈರ್ಯ ಮತ್ತು ನಿರ್ಧಾರಗಳಿಂದ ದಾಟಿ ಬಂದ. ಕಾಲದ ಮರಳಲ್ಲಿ ತಮ್ಮ ಹೆಜ್ಜೆಯ ಗುರುತನ್ನು ಬಿಟ್ಟುಹೋಗುವ ಮಹಾನ್ ಚೇತನಗಳೆಷ್ಟೋ ಮಂದಿ ಜನಿಸಿದ್ದಾರೆ. ಅನೇಕ ತಲೆಮಾರುಗಳವರೆಗೆ ಅವರ ಜೀವನ ಬೆಳಕು ಬೀರುವ ದಾರಿದೀಪಗಳಾಗಿವೆ. ಜಾರ್ಜ್ ವಾಷಿಂಗ್‌ಟನ್ ಕಾರ್ವರ್ ಅಂತಹ ಒಬ್ಬ ಮಹನೀಯ.

✝